# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1435
ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 18.12.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಮೇಕೆದಾಟು ಕುಡಿಯುವ ನೀರು ಮತ್ತು ಸಮತೋಲನ ಜಲಾಶಯ ಯೋಜನೆಯ ಪ್ರಗತಿ ಮತ್ತು ಅನುಷ್ಠಾನದ ಸ್ಥಿತಿ ಏನಾಗಿದೆ: ಈ ಯೋಜನೆ ಬೃಹತ್ ನೀರಾವರಿ ಸಮಸ್ಯೆ ಪರಿಹಾರಕ್ಕೆ ಹೇಗೆ ದೃಷ್ಟಿಕೋನ ನೀಡುತ್ತಿದೆ ಮತ್ತು ಕೇಂದ್ರ ಸರ್ಕಾರ ಈ ಸಮಸ್ಯೆಗೆ ಹೇಗೆ ಸ್ಪಂದಿಸುತ್ತಿದೆ: (ಮಾಹಿತಿ ನೀಡುವುದು) | ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ ಜಲಾಶಯವನ್ನು ನಿರ್ಮಿಸಿ, 67.16 ಟಿ.ಎಂ.ಸಿ ನೀರನ್ನು ಶೇಖರಿಸಿ, ಬೆಂಗಳೂರು ನಗರಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಹಂಚಿಕೆಯಾಗಿರುವ 4.75 ಟಿ.ಎಂ.ಸಿ ನೀರನ್ನು (Consumptive use) ಕುಡಿಯುವ ನೀರಿಗಾಗಿ ಉಪಯೋಗಿಸಲು ಮತ್ತು 400 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದಿಸಲು ಯೋಜಿಸಲಾಗಿದೆ.<br>• ಮೇಕೆದಾಟು ಸಮತೋಲನಾ ಜಲಾಶಯ/ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು (DPR) ರೂ.9000.00 ಕೋಟಿಗಳಿಗೆ ತಯಾರಿಸಿ ದಿನಾಂಕ:18.01.2019 ರಂದು ಅನುಮೋದನೆ ಕೋರಿ ಕೇಂದ್ರ ಜಲ ಆಯೋಗ (CWC), ನವದೆಹಲಿಗೆ ಸಲ್ಲಿಸಲಾಗಿದೆ.<br>• ದಿನಾಂಕ: 01.02.2024 ರಂದು ಜರುಗಿದ 28 ನೇ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ಸಭೆಯ ನಿರ್ಣಯದಂತೆ, ಯೋಜನೆಯ ಕಾರ್ಯಸಾಧ್ಯತೆ ಸ್ಥಾಪಿಸಲು ಕೇಂದ್ರ ಜಲ ಆಯೋಗದ (CWC) ವಿವಿಧ ನಿರ್ದೇಶನಾಲಯಗಳಲ್ಲಿ ವಿವರವಾದ ಯೋಜನಾ ವರದಿಯ ತಾಂತ್ರಿಕ/ಆರ್ಥಿಕ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ.<br>• ಯೋಜನೆಗೆ ಅವಶ್ಯವಿರುವ Environment Impact Assessment ಹಾಗೂ Environment Management Plan ವರದಿಗಳನ್ನು ತಯಾರಿಸಲು Terms of Reference (TOR) ಅರ್ಜಿಯನ್ನು ಭಾರತ ಸರ್ಕಾರದ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEF & CC) ದಿಂದ ಅನುಮೋದನೆ ಬಾಕಿ ಇರುತ್ತದೆ.<br>• ಯೋಜನೆಯ ಮುಳುಗಡೆ ಪ್ರದೇಶದ ಗುರುತಿಸುವಿಕೆ ಕಾರ್ಯವನ್ನು ಪೂರ್ಣಗೊಳಿಸಲಾಗಿರುತ್ತದೆ ಹಾಗೂ ಅರಣ್ಯ ಭೂಮಿಗೆ ಬದಲಾಗಿ 7404.64 ಹೆ. ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ compensatory afforestation land ಅನ್ನು ಮಂಡ್ಯ, ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗುರುತಿಸಲಾಗಿದೆ.<br>• ಮೇಕೆದಾಟು ಯೋಜನೆಯ ಕಾಮಗಾರಿಗಳನ್ನು ಮತ್ತು ಭೂಸ್ವಾಧೀನ ಪ್ರಕ್ರಿಯೆಗಳನ್ನು ಚುರುಕುಗೊಳಿಸಲು ಸರ್ಕಾರದ ದಿನಾಂಕ:18.11.2023 ರ ಆದೇಶದಲ್ಲಿ ಕಾವೇರಿ ನೀರಾವರಿ |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | ನಿಗಮದ ವ್ಯಾಪ್ತಿಯ ಒಂದು ವಿಭಾಗ ಕಚೇರಿ ಮತ್ತು ಒಂದು ಉಪವಿಭಾಗ ಕಚೇರಿಗಳನ್ನು ಸ್ಥಳಾಂತರಿಸಿ/ ಮರುನಾಮಕರಣ ಮಾಡಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಹಾರೋಬೆಲೆಯನ್ನು ಕೇಂದ್ರ ಸ್ಥಾನವನ್ನಾಗಿ ನಿಗದಿಪಡಿಸಲಾಗಿದ್ದು, ಪ್ರಸ್ತುತ ಈ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರುತ್ತವೆ.<br>• ಮೇಕೆದಾಟು ಯೋಜನೆಯ DPR ಸಂಬಂಧಿಸಿದಂತೆ ತಮಿಳುನಾಡು ಸಲ್ಲಿಸಿದ ವಿವಿಧ ಅರ್ಜಿಗಳನ್ನು (MA No:3127/2018 ಮತ್ತು MA No:93/2022) ದಿನಾಂಕ:13.11.2025 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿದೆ.<br>• ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ವಾರ್ಷಿಕ 177.25 ಟಿ.ಎಂ.ಸಿ. ನೀರನ್ನು ಕೆ.ಆರ್.ಎಸ್. ಮತ್ತು ಕಬಿನಿ ಜಲಾಶಯಗಳಿಂದ ತಮಿಳುನಾಡಿಗೆ ಹರಿಸಬೇಕಾಗಿದ್ದು, ನೀರನ್ನು ಕೆ.ಆರ್.ಎಸ್. ಮತ್ತು ಕಬಿನಿ ಜಲಾಶಯಗಳಲ್ಲಿ ಸಂಗ್ರಹ ಮಾಡಿ ತಮಿಳುನಾಡಿಗೆ ಹರಿಸಲಾಗುತ್ತಿದೆ. ಮೇಕೆದಾಟು ಅಣೆಕಟ್ಟನ್ನು ನಿರ್ಮಿಸಿದ್ದಲ್ಲಿ ತಮಿಳುನಾಡಿಗೆ ಬಿಡುಗಡೆ ಮಾಡಬೇಕಾಗಿರುವ ನೀರನ್ನು ಈ ಅಣೆಕಟ್ಟೆಯಲ್ಲಿ ಸಂಗ್ರಹಿಸಲು ಉದ್ದೇಶಿಸಿರುವುದರಿಂದ ಕೆ.ಆರ್.ಎಸ್ ಮತ್ತು ಕಬಿನಿ ಜಲಾಶಯಗಳಲ್ಲಿ ಸಂಗ್ರಹವಾಗುವ ನೀರನ್ನು ಸಂಪೂರ್ಣವಾಗಿ ಅದೇ ಜಲಾಶಯಗಳ ಅಡಿಯಲ್ಲಿನ ಅಚ್ಚುಕಟ್ಟು ಪ್ರದೇಶಗಳಿಗೆ ಬಳಸಲು ಉದ್ದೇಶಿಸಲಾಗಿದೆ. |
| (ಆ) | ರಾಜ್ಯದಲ್ಲಿ ಮಧ್ಯಮ ಮತ್ತು ಬೃಹತ್ ನೀರಾವರಿ ಯೋಜನೆಗಳ ನಿರ್ಮಾಣ ಹಾಗೂ ಪುನರ್ ನಿರ್ಮಾಣ ಸಂಬಂಧ ಯಾವುದೇ ನವೀನ ಯೋಜನೆಗಳನ್ನು ಕೈಗೊಳ್ಳಲಾಗದೆಯೇ: | ಜಲಸಂಪನ್ಮೂಲ ಇಲಾಖೆಯಡಿಯಲ್ಲಿನ ನೀರಾವರಿ ಯೋಜನೆಗಳಲ್ಲಿ ನೀರಿನ ಸಮರ್ಪಕ ಬಳಕೆಗಾಗಿ ನವೀನ ತಂತ್ರಜ್ಞಾನಗಳನ್ನು ಅಳವಡಿಸಲಾಗುತ್ತಿದೆ. ಇದರಡಿ<br>• SCADA (Supervisory Control And Data Acquisition) ಯೋಜನೆಯಲ್ಲಿ ಸ್ವಯಂ-ಯಾಂತ್ರೀಕರಣ, ದೃಢ ಸಂವಹನ ವ್ಯವಸ್ಥೆ ಮತ್ತು GIS ಆಧಾರಿತ ನೀರಾವರಿ ಜಾಲ ನಿರ್ವಹಣಾ ಮಾಹಿತಿ ವ್ಯವಸ್ಥೆ (INMIS) ಯನ್ನು ಸಂಯೋಜಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ತೆರೆದ ಕಾಲುವೆ (open canal) ಗಳಲ್ಲಿನ ನೀರಿನ ನಷ್ಟವನ್ನು ತಡೆಗಟ್ಟಲು, ಗುಣಮಟ್ಟವನ್ನು ಕಾಪಾಡಿಕೊಳ್ಳಲು, ಪೂರೈಕೆಯನ್ನು ನಿಯಂತ್ರಿಸಲು, ಸಮಾನ ನೀರಿನ ವಿತರಣೆಯನ್ನು ಖಚಿತಪಡಿಸಿಕೊಳ್ಳಲು, ನೀರಿನ ದಕ್ಷತೆಯನ್ನು ಸುಧಾರಿಸಲು ಪೈಪ್‌ಲೈನ್ ವಿತರಣಾ ವ್ಯವಸ್ಥೆ (Piped Distribution Network) ಹಾಗೂ ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.<br>• ಅಲ್ಲದೇ, ಅತಿವೃಷ್ಟಿಯಿಂದ ಹಾಗೂ ಅನಿರೀಕ್ಷಿತ ಮಳೆಯಿಂದಾಗಿ ನದಿಗಳು ಉಕ್ಕಿ ಹರಿದು ನದಿಪಾತ್ರದ ಪ್ರದೇಶಗಳು ಜಲಾವೃತ್ತವಾಗುವುದನ್ನು, ಸುತ್ತಮುತ್ತಲಿನ ಗ್ರಾಮಗಳನ್ನು ಸಂರಕ್ಷಿಸಲು ನದಿಗಳ ಪ್ರವಾಹ ನಿಯಂತ್ರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಇ) | ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಮತ್ತು ನೀರಾವರಿ ಹಂಚಿಕೆಯ ಬಗ್ಗೆ ನವೀಕರಿಸಿದ ಯೋಜನೆಗಳಾವುವು? (ವಿವರ ನೀಡುವುದು) | • ಕಾವೇರಿ ನದಿ ನೀರಿನ ಹಂಚಿಕೆಯ ವಿಚಾರದ ಬಗ್ಗೆ ಕಾವೇರಿ ಜಲ ವಿವಾದ ನ್ಯಾಯಾಧೀಕರಣವು ದಿನಾಂಕ:05.02.2007 ರಂದು ಆದೇಶವನ್ನು ನೀಡಿತ್ತು. ಸದರಿ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:16.02.2018 ರಂದು ನೀಡಿರುವ ಆದೇಶದಲ್ಲಿ ಮಾರ್ಪಡಿಸಿದ್ದು ರಾಜ್ಯಕ್ಕೆ ನೀರಾವರಿ, ಕುಡಿಯುವ ನೀರು ಹಾಗೂ ಇತರೆ ಉದ್ದೇಶಗಳಿಗೆ ಒಟ್ಟಾರೆ 284.75 TMC ನೀರಿನ ಹಂಚಿಕೆಯಾಗಿರುತ್ತದೆ. ಸದರಿ ನೀರಿನ ಸಮರ್ಪಕ ಬಳಕೆಗಾಗಿ ರಾಜ್ಯ ಸರ್ಕಾರವು ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿದೆ.<br>• ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:16.02.2018 ರಂದು ಮಾರ್ಪಡಿಸಿರುವಂತೆ ನ್ಯಾಯಾಧೀಕರಣದ ಆದೇಶವನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ಮತ್ತು ಕಾವೇರಿ ಜಲ ನಿಯಂತ್ರಣ ಸಮಿತಿ (CWRC) ಯನ್ನು ರಚಿಸಿದ್ದು, ಸದರಿ ಪ್ರಾಧಿಕಾರ ಮತ್ತು ಸಮಿತಿಯಲ್ಲಿ ರಾಜ್ಯ ಸರ್ಕಾರವು ಸದಸ್ಯ ರಾಜ್ಯವಾಗಿರುತ್ತದೆ. ಕಾವೇರಿ ನದಿ ನೀರಿನ ವಿಷಯದ ಬಗ್ಗೆ ಪಾಧಿಕಾರ ಹಾಗೂ ಸಮಿತಿಯ ಸಭೆಗಳಲ್ಲಿ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಮೇಕೆದಾಟು ಯೋಜನೆಯ ಬಗ್ಗೆ ತಮಿಳುನಾಡು ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಗಳು ದಿನಾಂಕ:13.11.2025 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಗೊಳಿಸಿ ರಾಜ್ಯದ ಪರವಾಗಿ ತೀರ್ಪು ನೀಡಿದೆ.<br>• ಕಾವೇರಿ ನದಿ ನೀರಿನ ಹೆಚ್ಚುವರಿ ನೀರನ್ನು ಬಳಸಲು ತಮಿಳುನಾಡು ರಾಜ್ಯವು ಕೈಗೊಂಡಿರುವ ಕಾವೇರಿ-ವೈಗೈ-ಗುಂಡಾರ್ ನದಿ ಜೋಡಣೆ ಯೋಜನೆಯನ್ನು ಹಾಗೂ ಕರ್ನಾಟಕದ ಕಾವೇರಿ ನೀರನ್ನು ಬಳಸುವುದನ್ನು ವಿರೋಧಿಸಿ ಮೂಲದಾವೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ.<br>• ತಮಿಳುನಾಡು ರಾಜ್ಯವು 2012-13 ರಲ್ಲಿ ಉಂಟಾದ ಬೆಳೆ ನಷ್ಟಕ್ಕೆ ಪರಿಹಾರ ಕೋರಿ ಸಲ್ಲಿಸಿರುವ ಮೂಲ ದಾವೆಯು ವಿಚಾರಣೆಯ ಹಂತದಲ್ಲಿದ್ದು ರಾಜ್ಯವು ಅಗತ್ಯ ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.<br>• ಕಾವೇರಿ ಕಣಿವೆಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ 284.75 TMC ನೀರಿನ ಸಮರ್ಪಕ ಬಳಕೆಗಾಗಿ ಮಾಸ್ಟರ್ ಪ್ಲಾನ್ ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂ: ಜಸಂಇ 91 ಎನ್‌ಎಲ್‌ಎ 2025

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ